ಆಹಾಹಾ! ನೀವು ಲಲ್ಲೆ ಹೊಡೆಯೋದು ಸಾಲದು ಅಂತ ನಾನೂ ಮಾತಾಡ್ಬೇಕಾ ಅವಳ ಜೊತೆ? ಗೆಟ್ ಲಾಸ್ಟ್ –ಮೊದಲ ಸುತ್ತಿನ ಲಾವಾರಸ ಹೊರಬಿತ್ತು.

ಸೀನುವೇ ಮೊಬೈಲ್‌ನ ಲೌಡ್‌ಸ್ಪೀಕರ್ ಆನ್ ಮಾಡಿ ಉಮಾಗೆ ಡಯಲ್ ಮಾಡಿದ. ಅತ್ತಲಿಂದ 'ಹಲೋ... ಉಮಾ ಹಿಯರ್. ನಮ್ಮ ಟಾಕೀಸಿನ ಪ್ರದರ್ಶನಗಳು ಮೂರೂವರೆ, ಆರೂವರೆ, ಒಂಬತ್ತೂವರೆಗೆ; ನಿಮಗೆ ಗಾಂಧಿ ಕ್ಲಾಸಾ, ಮಿಡಲ್ಲಾ, ಬಾಲ್ಕನೀನಾ?' ಎಂದು ದನಿ ಹೊರಟಿತು.

ಮಡದಿ ಅವಾಕ್ಕಾದಳು. ಆದರೆ ಅಷ್ಟು ಬೇಗ ಸೋಲೊಪ್ಪುವುದೆ?

'ಯಾರನ್ನು ಕರ್ಕೊಂಡ್ಹೋಗಕ್ಕೇಂತ ಬರೀ ಥಿಯೇಟರ್‌ಗಳ ನಂಬರ್ ಇಟ್ಕೊಂಡಿರೋದು?' ಎಂದು ಸಂಶಯದ ಮತ್ತೊಂದು ಬಾಣ ಒಗೆದಳು.

ಡೈರಿ ಸಹವಾಸ ಕಷ್ಟ. ನನಗೂ ಡೈರಿಯೆಂದರೆ ಮೊದಲಿನಿಂದಲೂ ಒಂದು ವಿಧದ ಆಕರ್ಷಣೆಯೇ. 'ಬೃಂದಾವನದೊಳು ಹಾಲನು ಮಾರಲು ಹೋಗುವ ಬಾರೇ ಬೇಗ ಸಖೀ' ಎನ್ನುವ ಗೀತೆಯಿಂದಲೇ ಡೈರಿ ಫಾರ್ಮಿಂಗ್ ಪ್ರಪಂಚದ ಅತ್ಯಂತ ಹಳೆಯ ಉದ್ಯೋಗವೆಂದು ತಿಳಿದುಬರುತ್ತದೆ. ಪುಟ್ಟ ಪಟ್ಟಣವಾದ ಗೋಕುಲದಲ್ಲಿ ಉತ್ಪಾದಿತವಾದ ಹಾಲನ್ನು ಗೋಪಿಕೆಯರು ದ್ವಾರಕೆಗೆ ಕೊಂಡೊಯ್ದು ಮಾರುತ್ತಿದ್ದರಂತೆ. ಆ ಹಾಲಿನ ಪ್ರಮಾಣ ದ್ವಾರಕೆಯಂತಹ ದೊಡ್ಡ ನಗರಕ್ಕೆ ಸಾಲುತ್ತಿತ್ತೇ ಎಂದು ಪ್ರಸಿದ್ಧ ಕವಿಯೊಬ್ಬರನ್ನು ಕಿಡಿಗೇಡಿಯೊಬ್ಬ ಕೇಳಿದ. 'ಮಧ್ಯದಲ್ಲಿ ಯಮುನೆಯನ್ನು ದಾಟಿ ಹೋಗಬೇಕಿತ್ತಲ್ಲ, ನದಿಯ ಈ ಕಡೆಯಿಂದ ಆ ಕಡೆಗೆ ದಾಟುವ ಹೊತ್ತಿಗೆ ಮುಕ್ಕಾಲು ಬಿಂದಿಗೆ ಹಾಲು ಫುಲ್ ಬಿಂದಿಗೆ ಆಗುತ್ತಿತ್ತು' ಎಂದು ಉತ್ತರಿಸಿದರಂತೆ ಕವಿವರ್ಯ.

ಡೈರಿ ಎಂದಾಕ್ಷಣ ಡೈರಿಯಲ್ಲಿ ಕೆಲಸ ಮಾಡುತ್ತಿದ್ದ ಗೆಳೆಯರೊಬ್ಬರು ಅನುಭವಿಸಿದ ಮತ್ತೊಂದು ಪ್ರಸಂಗ ನೆನಪಾಗುತ್ತದೆ. ಅಂದು ಸಹ, ಎಂದಿನಂತೆಯೇ, ಡೈರಿಯ ಆವರಣದಲ್ಲಿ ಬಂದು ನಿಂತ ಟ್ಯಾಂಕರ್‌ಗೆ ಹಾಲು ತುಂಬಿಸಿ, ಇನ್ನೇನು ಮುಚ್ಚಳ ಮುಚ್ಚಬೇಕು, ಅಷ್ಟರಲ್ಲಿ ಎಲ್ಲಿಂದಲೋ ಓಡಿಬಂದ ಬಡಕಲು ಕಜ್ಜಿನಾಯಿಯೊಂದು ಹಾಲಿನ ಟ್ಯಾಂಕರ್‌ನೊಳಗೆ ಛಂಗನೆ ನೆಗೆದುಬಿಟ್ಟಿತು! ಬಿಸ್ಕತ್ತಿನ  ಆಮಿಷಕ್ಕೆ ಜಗ್ಗದೆ, ಕೋಲಿನ ಬೆದರಿಕೆಗೆ ಬಗ್ಗದೆ, ಹಾಲಿನಲ್ಲಿ ನಾಯಿ ಈಜಿದ್ದೂ ಈಜಿದ್ದೇ. ಕೊನೆಗೆ ಅದನ್ನು ಹಿಡಿಯಲು ಈಜು ಬಲ್ಲವರೊಬ್ಬರು ಹಾಲಿನೊಳಗೆ ಇಳಿಯುವುದು ಅನಿವಾರ್ಯವಾಯಿತು. ಪಕ್ಕದಲ್ಲಿದ್ದವರು, 'ಅಯ್ಯೊ .. ಇವರಿಗಿಂತ ಆ ಕಜ್ಜಿನಾಯಿಯೇ ಕ್ಲೀನ್ ಆಗಿತ್ತು..!' ಎಂದು ಬಿಡೋದೆ?

ಅದೇ ಸಂಜೆ. ಈ ಗೆಳೆಯರು ಅದೇ ಟ್ಯಾಂಕರ್, ಹಾಲು ಸಪ್ಲೈ ಮಾಡುವ ಬಡಾವಣೆಯಲ್ಲಿನ ನೆಂಟರ ಮನೆಗೆ ಹೋಗಿದ್ದರು. ಅವರು ಒಳಗಿನಿಂದಲೇ ತಾರಕ ಸ್ವರದಲ್ಲಿ 'ಬಾರೋ ಚಂದ್ರೂ, ನಿನಗೆ ಇಷ್ಟವಾದ ಹಾಲುಬಾಯಿ ಮಾಡಿದ್ದೀನಿ. ತಿನ್ನೋ' ಎಂದು ಬಲವಂತ ಮಾಡಿದ್ದೇ ಮಾಡಿದ್ದು. ಆ ಹಾಲಿಗೆ ಯಾವ ಯಾವ ಬಾಯಿ ಹೋಗಿದೆ ಎಂದು ಬಾಯಿ ಬಿಡುವಂತೆಯೇ ಇಲ್ಲ! ಬಿಟ್ಟರೆ ತಮ್ಮ ಡೈರಿಯ ಮಾನ ಮಾತ್ರವಲ್ಲ, ತಮ್ಮ ಮಾನವೂ ಹರಾಜಾಗುವ ಭಯ! ಆ ನೆಂಟರ ಕೈಯಿಂದ ಹಾಲುಬಾಯಿ ತಿನ್ನದೇ ತಪ್ಪಿಸಿಕೊಂಡು ಬರೆದದ್ದರ ಬಗ್ಗೆ ಬರೆದರೆ ಒಂದು ಡೈರಿ ಸಾಕಾಗಲಿಕ್ಕಿಲ್ಲ ಎಂದು ಆ ಗೆಳೆಯ ಬಾಯಿ ಹುಣ್ಣಾಗುವಷ್ಟು ನಕ್ಕಿದ್ದ!

ವರನಟ ಡಾ. ರಾಜ್ ಅವರ ಹಾಡುಗಳಂತೂ ನಂದಿನಿ ರೆಡ್ ಕಲರ್ ಹಾಲಿನಂತೆಯೇ. ಚಪ್ಪರಿಸಿ ಕುಡಿಯಬಹುದು.  ಅವರು ಹಾಡಿದ, 'ಹಾಲು.. – ಜೇನು.. ಒಂದಾದ ಹಾಗೆ..' / ಜೇನಿನ ಹೊಳೆಯೊ, ಹಾಲಿನ ಮಳೆಯೊ../ ತುಂಬು ಹರೆಯದ ಹೊಸ ಹೆಣ್ಣೆ; ಒಲೆಯ ಮೇಲಿನ ಹಸಿಬೆಣ್ಣೆ... ಮುಂತಾದ ಹಾಡುಗಳೇ ಇದಕ್ಕೆ ಸಾಕ್ಷಿ.

ಹಾಲಿನ ಡೈರಿಯ ಬಗ್ಗೆ ಮಾತನಾಡುವುದು ಅಂದಿನ ಡ್ಯುಯಟ್ ಯುಗಕ್ಕೆ ಹೊಂದಿದರೂ, ಇಂದಿನ ಡಯಟ್ ಯುಗಕ್ಕೆ ಹೊಂದುವುದಿಲ್ಲ. ನಾವು ದಿನಚರಿ ಡೈರಿಯತ್ತಲೇ ಗಮನ ಹರಿಸೋಣ. ಆಹಾ! ಒಂದೊಂದು ಡೈರಿಯೂ ಒಂದೊಂದು ಮಾದರಿ; ಇದೋ ನೋಡಿ, ಬಣ್ಣ ಬಣ್ಣದ ಮಾತುಗಳಿಂದ ವಿರಹವೇದನೆಯ ಉತ್ತುಂಗವನ್ನು ಸಾರುತ್ತಿರುವ ಡೈರಿ; ಅದೋ ಕಾಸಿಗ್ಕಾಸ್ ಗಂಟ್ಹಾಕಿ ಹೊಟ್ಟೆಗ್ಬೆನ್ ಅಂಟ್ಹಾಕಿ ಜೀವಿಸುವವನ ಬ್ಯಾಲೆನ್ಸ್ ಶೀಟ್ ಮಾದರಿಯ ಡೈರಿ; ಈ ರಾಶಿಯಲ್ಲಿ ನೋಡಿ; ಚಿಕ್ಕ ಡೈರಿ, ಪುಟ್ಟ ಡೈರಿ, ಮಿನಿ ಡೈರಿ, ಮೆಗಾ ಡೈರಿ, ಪಾಕೆಟ್ ಡೈರಿ, ಪಿಕ್ಪಾಕೆಟ್ ಡೈರಿ, ಸ್ಕೂಲ್ ಡೈರಿ, ಭೂಗೋಳದ ಡೈರಿ, ಭೂ–ಗೋಳಿನ ಡೈರಿ, ರಹಸ್ಯ ಡೈರಿ; ಎಲ್ಲಕ್ಕೂ ಕಳಶಪ್ರಾಯವಾದ ಕಪ್ಪದ ಡೈರಿ!

ಛಿ ಟಿವಿಯಲ್ಲಿ ಮೊನ್ನೆ ರಾಜಕಾರಣಿಯೊಬ್ಬರ ಒಂದು ಭರ್ಜರಿ ಸಂದರ್ಶನ! ಪ್ರಶ್ನೆ ಕೇಳೋ ಹೆಣ್ಣುಮಗಳದ್ದು ಎಂದಿನಂತೆ ಹೈ ಬೀಪಿ! ಎದುರಿಗೆ ಕುಳಿತವರದ್ದು ತದ್ವಿರುದ್ಧ ತಣ್ಣಗೆ ಫ್ರಿಜ್‌ನಲ್ಲಿಟ್ಟ ಹಾಲಿನಂತಹ ಉತ್ತರ.

★ ನಿಮ್ಮ ಡೈರಿಯಲ್ಲಿ ಎಸ್‌ಜಿ ಎಂದು ಬರೆದು ಒಂದು ಅಂಕಿ ಬರೆದಿದ್ದೀರಿ. ಯಾರದು ಎಸ್‌ಜಿ?

'ಅದು ಎಸ್ಜಿಸಿ – ಅಂದರೆ, ಶ್ರೀನಿವಾಸ ಜೆಂಟ್ಸ್ ಕಾರ್ನರ್ ಎಂದು. ಅದರ ಎದುರಿಗಿರುವ ಸಂಖ್ಯೆ ನಾನು ಸ್ಟಿಚಿಂಗ್ ಕೊಟ್ಟಿರುವ ಆರ್ಡರ್ ನಂಬರ್'

★ ಆರ್‌ಜಿ ಮತ್ತು ಅದರ ಮುಂದೆ ನಮೂದಿಸಿರುವ ಸಂಖ್ಯೆ ಏನು?

ಆರ್‌ಜಿ ಎಂದರೆ ರೂಪಾ ಗಾರ್ಮೆಂಟ್ಸ್; ಹೆಂಡತಿಯ ಬ್ಲೌಸ್ ಹೊಲೆಯಲು ಕೊಟ್ಟಿದ್ದೆ. ಅದರ ಸಂಖ್ಯೆ ಅದು!

★ ಶುದ್ಧ ಸುಳ್ಳು. ಈ  ಅಂಗಡಿಯನ್ನು ರೈಡ್ ಮಾಡಿದ್ದಾರೆ. ಅಲ್ಲಿ ಈ ಸಂಖ್ಯೆಯ ಪುಸ್ತಕವೇ ಇಲ್ಲ..

ಅದು ಪುಸ್ತಕದಲ್ಲಿ ಇರಲ್ಲ. ಮೊಬೈಲ್‌ನಲ್ಲಿ ಇರುತ್ತೆ.

★ ಮೊಬೈಲ್ ಕೂಡಾ ಚೆಕ್ ಮಾಡಿದ್ದಾರೆ, ಅದರಲ್ಲಿ ಇರಲಿಲ್ಲ.

ರೈಡ್ ಆದ ತಕ್ಷಣ ಹೆದರಿ ಮೊಬೈಲ್ ಬೀಳಿಸಿದ ರಭಸಕ್ಕೆ  ಕರಪ್ಟ್ ಆಗಿ ಡಾಟಾ ಹಾಳಾಗಿದೆ.

★ ಆರ್‌ವಿ ಎನ್ನುವುದಂತೂ ಲಂಚವೇ ಇರಬೇಕು?

ಅದು ರಂಗಾಚಾರ್ಲು ವೈದಿಕ ಸಂಸ್ಥೆಯದು. ನಮ್ಮಜ್ಜನ ತಿಥಿಗೆ ಮುಹೂರ್ತ ಬರೆಸಿಕೊಂಡು ಬಂದಿದ್ದೆ. ಅದೇ ಆ ಸಂಖ್ಯೆಗಳು. ಬೇಕಾದರೆ ಪಂಚಾಂಗ ನೋಡಿ ದೃಢಪಡಿಸಿಕೊಳ್ಳಲಿ.

★ ಡಿಜಿ ಎಂದು ಬರೆದು ಸಂಖ್ಯೆ ಬರೆದಿರುವುದು ದೇವೇಗೌಡರ ಹೆಸರಲ್ಲವೇ... ನಿಜ ಹೇಳಿ?

ಅದು ನೋಟು ನಿಷೇಧ ಆದ ಸಮಯದಲ್ಲಿ ನನಗೆ ಬರಬೇಕಾಗಿದ್ದ ಸಾಲದ ಹಣ. ಅವರೆಲ್ಲ ನೋಟು ನಿಷೇಧದಿಂದ ಪಾಪರ್ ಆದರು. ಆದ್ದರಿಂದ ಆ ದುಡ್ಡಿಗೆ ದೇವರೇ ಗತಿ ಎನ್ನುವುದಕ್ಕೆ ಡಿಜಿ ಎಂದು ಬರೆದೆ.

★ ಅದಕ್ಕೆ ದಾಖಲೆ?

ಹಣವೇ ಹೋದ ಮೇಲೆ ದಾಖಲೆಯೇಕೆ ಎಂದು ಹರಿದುಹಾಕಿದೆ.

★ ಹೋಗಲಿ, ಈ ಕೊನೇ ಪುಟದಲ್ಲಿ ಕೆಎಸ್‌ಈ ಎಂದು ಅಚ್ಚಕನ್ನಡದಲ್ಲಿ ಬರೆದಿದೆ. 'ವೈ' ಎಂದು ಬರೆದು '132' ಎಂದು ಬರೆದಿದೆಯಲ್ಲ? ಕೆಎಸ್ ಈಶ್ವರಪ್ಪ ಮತ್ತು ಯಡಿಯೂರಪ್ಪ ಅವರ ಹೆಸರಲ್ಲವೆ... ಸುಳ್ಳು ಹೇಳ್ಬೇಡಿ..!

'ಖಂಡಿತಾ ನಿಜ' ಎಂದರು ಆ ರಾಜಕಾರಣಿ. ಸಂದರ್ಶಕಿಗೆ ಖುಷಿಯೋ ಖುಷಿ. 'ಕೊನೆಗೂ ಕೈಗೆ ಸಿಕ್ಕೇಬಿಟ್ರು' ಎಂದು ಮುಂದಿನ ಪ್ರಶ್ನೆಯನ್ನು ತೂರಿದಳು. 'ಸರಿ ಈ 132 ಏನು? ಕೋಟೀನಾ...?'

'ಅಯ್ಯೋ, ರಾಜಕಾರಣಿಯಾಗಿ ನನಗೊಂದು ಅಭ್ಯಾಸವಿದೆ. ನನ್ನ ವಿರೋಧಿಗಳು ಪತ್ರಿಕೆಗಳಲ್ಲಿ ಪರಸ್ಪರ ಬೈದಾಡಿಕೊಂಡರೆ ಅದನ್ನು ಡೈರೀಲಿ ನೋಟ್‌ಮಾಡಿಕೊಳ್ತೀನಿ. ಇದು ಅವರಿಬ್ಬರೂ ಈ ವರ್ಷ ಬೈದಾಡಿಕೊಂಡಿರುವ ನ್ಯೂಸ್‌ಗಳು ಪಬ್ಲಿಶ್ ಆಗಿರುವ ಒಟ್ಟು ಸಂಖ್ಯೆ..' ಎಂದರಾತ ತಣ್ಣಗೆ!

'ಯಾವ ಪತ್ರಿಕೆಗಳಲ್ಲಿ ಈ ಸುದ್ದಿ ಬಂದಿದೆ?'

ಎಲ್ಲ ಪತ್ರಿಕೆಗಳಲ್ಲೂ ಬಂದಿದೆ. ಆದರೆ ನಾನು ಗಂಗೊಳ್ಳಿ ರಾಮಣ್ಣ ಅವರ ಪತ್ರಿಕೆಯಲ್ಲಿ ಬಂದದ್ದನ್ನಷ್ಟನ್ನೆ ಟಿಕ್ ಮಾಡಿಟ್ಟಿದ್ದೇನೆ!

ಅಷ್ಟರಲ್ಲಿ ಸಂದರ್ಶಕಿ ಲಗುಬಗೆಯಿಂದ ಸಂದರ್ಶನವನ್ನು ಅರ್ಧಕ್ಕೇ ತುಂಡರಿಸಿ, ಇದೀಗ ತಾನೆ ಬಂದ ಬ್ರೇಕಿಂಗ್ ಸುದ್ದಿಯನ್ನು ಗಟ್ಟಿ ಧ್ವನಿಯಲ್ಲಿ ಓದತೊಡಗಿದಳು.

'ವೀಕ್ಷಕರೆ ಇದೀಗ ತಾನೆ ಬಂದ ಮಹತ್ವದ ಸುದ್ದಿ–  ರಾಜಾ ಗೋವಿಂದರಾಯರ ಮನೆಯಲ್ಲಿ ಸಿಕ್ಕಿದ ಡೈರಿಯ ಬಗ್ಗೆ ಸುದ್ದಿ ಮಾಧ್ಯಮಗಳು ಯಾವುದೇ ವರದಿಯನ್ನು ಪ್ರಕಟಿಸಬಾರದೆಂದೂ, ಟೀವಿಗಳಲ್ಲಿ ಯಾವುದೇ ಚರ್ಚೆಗಳನ್ನು ನಡೆಸಬಾರದೆಂದೂ ರಾಜ್ಯದ ಘನ ನ್ಯಾಯಾಲಯ ಮಧ್ಯಂತರ ಆದೇಶ ನೀಡಿದೆ..'

ಮಧ್ಯಂತರದಲ್ಲೇ ಸಂದರ್ಶನ ನಿಂತುಹೋಯಿತು.

ಈಗ ಒಂದು ಬ್ರೇಕ್.. ಜಾಹೀರಾತು– ಟೀವಿಯಲ್ಲಿ ಪುನೀತ್ ರಾಜ್ಕುಮಾರ್ ಕೈಯಲ್ಲಿ ಹಾಲಿನ ಪೊಟ್ಟಣ ಹಿಡಿದುಕೊಂಡು ಪ್ರತ್ಯಕ್ಷರಾದರು.